ST ALOYSIUS

(DEEMED TO BE UNIVERSITY)

ESTD : 1880

MANGALURU, KARNATAKA 575003 - INDIA

# NEWS CLIPPINGS

**Media Coverage Archive**

## 16-05-2026 TO 31-05-2026

*Kannadaprabha 16-05-2026*

## ಕ್ಯಾ.ಶಕಿನ್ ರಾಜ್‌ಗೆ ಡಿಡಿಜಿ ಪ್ರಶಂಸಾ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಅಲೋಶಿಯಸ್ ವಿವಿಯ ಸ್ಕೂಲ್ ಆಫ್ ಕಾಮರ್ಸ್, ಫೈನಾನ್ಸ್ ಮತ್ತು ಅಕೌಂಟೆನ್ಸಿಯ ಸಹಾಯಕ ಪ್ರಾಧ್ಯಾಪಕ ಹಾಗೂ 18 ಕೆಎಆರ್‌ಬಿಎನ್ ಎನ್‌ಸಿಸಿಯ ಕ್ಯಾ.ಶಕಿನ್ ರಾಜ್ ಅವರಿಗೆ ಪ್ರತಿಷ್ಠಿತ 'ಡಿಡಿಜಿ ಪ್ರಶಂಸಾ ಪ್ರಶಸ್ತಿ-2026' ದೊರೆತಿದ್ದು, ರಾಷ್ಟ್ರೀಯ ಕೆಡೆಟ್ ಕಾಪ್ ರ್ಸ್‌ನ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಉಪ ಮಹಾನಿರ್ದೇಶಕರಿಂದ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ.

ಏರ್‌ಕಮಾಡೋರ್‌ಎಸ್‌ಬಿ ಅರುಣ್ ಕುಮಾರ್‌ವಿಎಸ್‌ಎಂ, ಡಿಡಿಜಿ (ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ) ನೀಡಿದ ಈ ಪ್ರತಿಷ್ಠಿತ ಗೌರವವು, ರಾಷ್ಟ್ರೀಯ ಕೆಡೆಟ್ ಕಾಪ್ ರ್ಸ್‌ನ ಪ್ರತಿಷ್ಠೆಯನ್ನು ಹೆಚ್ಚಿಸಿದ ಮತ್ತು ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯಕ್ಕೆ ಪ್ರಶಸ್ತಿಗಳನ್ನು ಗೆದ್ದ ಕ್ಯಾಪ್ಟನ್ ಶಕಿನ್ ರಾಜ್ ಅವರ ಅತ್ಯಂತ ಸೇವೆ ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.



ಕ್ಯಾ.ಶಕಿನ್ ರಾಜ್‌ಗೆ ಪ್ರಶಸ್ತಿ ಸ್ವೀಕರಿಸಿದರು

ಕ್ಯಾಪ್ಟನ್ ಶಕಿನ್ ರಾಜ್ ಅವರು, ಕೆಡೆಟ್ ತರಬೇತಿ, ಸಾಮಾಜಿಕ ಸೇವಾ ಉಪಕ್ರಮಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಘಟಕ ರಾಷ್ಟ್ರೀಯ ಮಟ್ಟದ ಶಿಬಿರಗಳು ಮತ್ತು ಸಮುದಾಯ ಸಂಪರ್ಕ ಚಟುವಟಿಕೆಗಳಲ್ಲಿ ಭಾಗವಹಿಸಿದೆ. ಈ ಹಿಂದೆ ಕ್ಯಾಪ್ಟನ್ ಶಕಿನ್ ರಾಜ್ 2016-17 ರಲ್ಲಿ ಡಿಡಿಜಿಎನ್‌ಸಿಸಿ ಪ್ರಶಂಸಾ ಪ್ರಶಸ್ತಿ ಮತ್ತು 2021-22 ರಲ್ಲಿ ಮುಖ್ಯಮಂತ್ರಿ ಪ್ರಶಂಸಾ ಪ್ರಶಸ್ತಿಯನ್ನು ಪಡೆದಿದ್ದಾರೆ.

*Deccan Herald 16-05-2026*




**Capt Shakin Raj of 18 KAR BN NCC receives the Commendation Card from Air Commodore S B Arunkumar VSM, DDG (Karnataka & Goa Directorate).**

# Capt Shakin Raj receives DDG Commendation Award-2026

**MANGALURU, DHNS:** Capt Shakin Raj of 18 KAR BN NCC and Assistant Professor, School of Commerce, Finance and Accountancy, St Aloysius (Deemed to be University), has been presented with the Commendation Card by the Deputy Director General, Karnataka and Goa Directorate, National Cadet Corps.

The honour awarded by the Air Commodore S B Arunkumar VSM, DDG (Karnataka & Goa Directorate), recently, recognising Capt Shakin Raj's 'service of a very high order' has enhanced the image of the National Cadet Corps and won laurels for the NCC Directorate, Karnataka & Goa.

Capt Shakin Raj has been actively involved in cadet training, social service initiatives, and institutional development programmes. Under his guidance, the unit has seen consistent participation in the national-level camps and community outreach activities, reflecting disciplined leadership and commitment to youth development.

Earlier, Capt shakin Raj has received DDGNCC commendation Award 2016-17 and Chief Minister Commendation Award at 2021-22.

The Vice Chancellor, management, staff and students of St Aloysius (Deemed to be University) congratulated Capt shakin Raj for receiving the honour.

*Hosadigantha 16-05-2026*

# ವಲೇರಿಯನ್ ಡಿ'ಸೋಜರ ಕಥಾ ಸಂಗ್ರಹ ಪುಸ್ತಕ ಬಿಡುಗಡೆ



**ಮಂಗಳೂರು:** ಕೊಂಕಣಿ ಸಾಹಿತ್ಯ ಮತ್ತು ಸಂಘಟನೆಗೆ ವಲ್ಲಿ ವಗ್ಗ ಎಂದೇ ಖ್ಯಾತರಾದ ವಲೇರಿಯನ್ ಡಿಸೋಜ ಅವರ ಕೊಡುಗೆ ಮಹತ್ತರವಾದುದು ಎಂದು ಕೊಂಕಣಿ ಭಾಷಾ ಸಲಹಾ ಸಮಿತಿಯ ಸಂಚಾಲಕ, ಕವಿ ಮೆಲ್ವಿನ್ ರೊಡ್ರಿಗಸ್ ಅಭಿಪ್ರಾಯಪಟ್ಟರು.

ಅವರು ವಲ್ಲಿ ವಗ್ಗ ಮೈಸೂರು ಕಾವ್ಯನಾಮದಿಂದ ಖ್ಯಾತರಾಗಿರುವ, ನಿರ್ಕಾಣ್ - ವಗ್ಗದ ವಲೇರಿಯನ್ ಡಿಸೋಜಾ ಅವರ ವಿಂಚ್ಣಾರ್ ಕಾಣಿಯೊ (ಆಯ್ದ ಕತೆಗಳು) ಕಥಾ ಸಂಗ್ರಹವನ್ನು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸಹೋದಯ ಸಭಾಂಗಣದಲ್ಲಿ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ವಲ್ಲಿ ವಗ್ಗ ಅವರು ಅಭಿಪ್ರಾಯ ಬೇಧವಿರುವ ಕೊಂಕಣಿ ಲೇಖಕರನ್ನು ಒಗ್ಗೂಡಿಸಿ, ಸಂಬಂಧಗಳನ್ನು ದಾರದಲ್ಲಿ ಪೋಣಿಸುವ ದರ್ಜಿಯಂತೆ. ಕಳೆದ ಆರು ದಶಕಗಳಿಂದ ಸತತವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಅವರ ಸಾಹಿತ್ಯವನ್ನು ಸಂಭ್ರಮಿಸುವುದೇ ಅವರಿಗೆ ನಾವು ಸಲ್ಲಿಸಬಹುದಾದ ಶ್ರೇಷ್ಠ ಗೌರವ ಎಂದರು.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಚ್. ಎಮ್.ಪೆರ್ನಾಲ್ ವಿಂಚ್ಣಾರ್ ಕಾಣಿಯೊ ಕೃತಿತಿಯನ್ನು ಪರಿಚಯಿಸಿದರು. 1964 ರಲ್ಲಿ ಬರವಣಿಗೆ ಆರಂಭಿಸಿ, ಕನ್ನಡದಲ್ಲೂ ಸಾಕಷ್ಟು ಕತೆಗಳನ್ನು ಬರೆದಿರುವ ವಲ್ಲಿ ವಗ್ಗ ಕರ್ನಾಟಕ ರಾಜ್ಯೋತ್ಸವ ಪುರಸ್ಕೃತ ಹಿರಿಯ ಕತೆಗಾರರಾಗಿದ್ದು ಸಮಾಜದಲ್ಲಿ ದುರ್ಲಕ್ಷ್ಯಕ್ಕೊಳಗಾದ ಧಮನಿತ ವರ್ಗದ ಪರವಾಗಿ ನಿಲ್ಲುವುದು ಮತ್ತು ಜೀವಪರತೆಯನ್ನು ಸಾರುವುದೇ ಅವರ ಕತೆಗಳ ಪ್ರಮುಖ ಗುಣ ಎಂದರು. ಲೊಯ್ ಡಿ'ಸೋಜಾ ಈ ಸಂದರ್ಭದಲ್ಲಿ ಇದ್ದರು. ಲಿಬೇರಾ ಡಿ ಸೋಜಾ ಸ್ವಾಗತಿಸಿ, ವಲ್ಲಿ ವಗ್ಗ ವಂದಿಸಿದರು. ಕವಿ ಟೈಟಸ್ ನೊರೊನ್ಹಾ ಕಾರ್ಯಕ್ರಮ ನಿರೂಪಿಸಿದರು.

*Prajavani 16-05-2026*

# 'ವಿಂಚ್ಣಾರ್ ಕಾಣಿಯೊ' ಕಥಾ ಸಂಗ್ರಹ ಬಿಡುಗಡೆ



ಮಂಗಳೂರು: 'ಕೊಂಕಣಿ ಲೇಖಕರನ್ನು ಒಗ್ಗೂಡಿಸಿ, ಸಂಬಂಧಗಳನ್ನು ದಾರದಲ್ಲಿ ಪೋಣಿಸುವ ದರ್ಜಿಯಂತೆ ಕಾರ್ಯ ನಿರ್ವಹಿಸುವ ವಲ್ಲಿ ವಗ್ಗ ಅವರ ಸೇವೆ ಸ್ತುತ್ಯಾರ್ಹ. ಆರು ದಶಕಗಳಿಂದ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಅವರ ಸಾಹಿತ್ಯವನ್ನು ಸಂಭ್ರಮಿಸುವುದೇ ಅವರಿಗೆ ನಾವು ಸಲ್ಲಿಸಬಹುದಾದ ಶ್ರೇಷ್ಠ ಗೌರವ' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯ, ಕೊಂಕಣಿ ಭಾಷಾ ಸಲಹಾ ಸಮಿತಿಯ ಸಂಚಾಲಕರೂ ಆಗಿರುವ ಮೆಲ್ವಿನ್ ರೊಡ್ರಿಗಸ್ ನುಡಿದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸಹೋದಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಲ್ಲಿ ವಗ್ಗ, ಮೈಸೂರು ಕಾವ್ಯನಾಮದಿಂದ ಖ್ಯಾತರಾಗಿರುವ ವಲೇರಿಯನ್ ಡಿಸೋಜ ಅವರ 'ವಿಂಚ್ಣಾರ್ ಕಾಣಿಯೊ' (ಆಯ್ದ ಕತೆಗಳು) ಕಥಾ ಸಂಗ್ರಹವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಕಥಾ ಸಾಹಿತ್ಯದಲ್ಲಿ ನಿಖರತೆ, ಔದಾರ್ಯ ಮತ್ತು ಸಂಕ್ಷಿಪ್ತತೆ ಮುಖ್ಯ ಗುಣ. ವಲ್ಲಿ ವಗ್ಗ ಅವರ ಕತೆಗಳಲ್ಲಿ ಇವು ಢಾಳಾಗಿವೆ' ಎಂದರು.

ಕೃತಿಯನ್ನು ಪರಿಚಯಿಸಿದ ಸಾಹಿತಿ ಎಚ್.ಎಂ. ಪೆರ್ನಾಲ್, 'ಕನ್ನಡದಲ್ಲೂ ಅನೇಕ ಕತೆಗಳನ್ನು ಬರೆದಿರುವ ವಲ್ಲಿ ವಗ್ಗ ಅವರು ತಮ್ಮ ಕತೆಗಳ ಮೂಲಕ ಸಮಾಜದಲ್ಲಿ ದುರ್ಲಕ್ಷ್ಯಕ್ಕೊಳಗಾದವರ ಪರವಾಗಿ ನಿಂತು, ಜೀವಪರತೆಯನ್ನು ಸಾರಿದ್ದಾರೆ. ಅವರ ಕತೆಗಳು ಕಾಲಾತೀತ ಮೌಲ್ಯಗಳನ್ನು ಸಾರುತ್ತವೆ' ಎಂದರು.

ಲಿಬೇರಾ ಡಿಸೋಜ ಸ್ವಾಗತಿಸಿದರು. ವಲ್ಲಿ ವಗ್ಗ ವಂದಿಸಿದರು. ಲೊಯ್ ಡಿಸೋಜ ಹಾಜರಿದ್ದರು. ಕವಿ ಟೈಟಸ್ ನೊರೊನ್ಹಾ ಕಾರ್ಯಕ್ರಮ ನಿರೂಪಿಸಿದರು.

*Prajavani 17-05-2026*



ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ 'ಅನ್‌ಬಾಕ್ಸಿಂಗ್ ಎಐ 2.0' ಕಾರ್ಯಾಗಾರ ನಡೆಯಿತು

# ಅಲೋಶಿಯಸ್ ವಿವಿಯಲ್ಲಿ ಕೃತಕ ಬುದ್ಧಿಮತ್ತೆ ಕಾರ್ಯಾಗಾರ

ಮಂಗಳೂರು: ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್ ವಿಭಾಗವು, ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ, ವೈದ್ಯಕೀಯ ವೃತ್ತಿಪರರಿಗೆ 'ಅನ್‌ಬಾಕ್ಸಿಂಗ್ ಎಐ2.0' ಎಂಬ ಒಂದು ದಿನದ ಪ್ರಾಯೋಗಿಕ ಕಾರ್ಯಾಗಾರ ಆಯೋಜಿಸಿತ್ತು.

ಕಾರ್ಯಾಗಾರ ಉದ್ಘಾಟಿಸಿದ ಅಲೋಶಿಯಸ್ ವಿ.ವಿ. ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, 'ಜಗತ್ತು ಹೊಸ ಶೈಕ್ಷಣಿಕ ಹಾದಿಯಲ್ಲಿ ಸಾಗುತ್ತಿದೆ. ಡಿಜಿಟಲೀಕರಣದ ಮೂಲಕ ತಂತ್ರಜ್ಞಾನದ ಮಾನವೀಕರಣಕ್ಕೆ ಹೊರಳುತ್ತಿದೆ. ಕೃತಕ ಬುದ್ಧಿಮತ್ತೆ (ಎಐ) ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರವನ್ನು ಪರಿವರ್ತಿಸುತ್ತಿದ್ದರೂ, ಮಾನವ ಬುದ್ಧಿಮತ್ತೆ ಮತ್ತು ನೈತಿಕ ಜವಾಬ್ದಾರಿಯನ್ನು ದುರ್ಬಲಗೊಳಿಸಲಾರದು' ಎಂದರು.

ಮುಖ್ಯ ಅತಿಥಿ, ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆಗಳ ನಿರ್ದೇಶಕ ಫಾ. ಫೌಸ್ತಿನ್ ಲೂಕಾಸ್ ಲೋಬೊ, ಕೃತಕ ಬುದ್ಧಿಮತ್ತೆಯ ವಿವೇಚನಾಯುಕ್ತ ಬಳಕೆಯ ಅಗತ್ಯವನ್ನು ತಿಳಿಸಿ 'ತಾಂತ್ರಿಕ ಪ್ರಗತಿಯ ನಡುವೆ ಮಾನವ ಅಂತಃಕರಣವನ್ನು ಕಳೆದುಕೊಳ್ಳಬಾರದು' ಎಂದರು.

ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ರಮೇಶ್ ಭಟ್ ಎಂ. ಮಾತನಾಡಿದರು. ಡಾ. ಎಸ್. ರೂಬನ್ ಸ್ವಾಗತಿಸಿದರು. ಡಾ. ಗ್ಲೆನ್ಸನ್ ಟೋನಿ ಕಾರ್ಯಕ್ರಮ ನಿರೂಪಿಸಿದರು. ಡಾ. ಗೀತಾ ಪಿಂಟೊ ವಂದಿಸಿದರು.

ಉಪನ್ಯಾಸ ಗೋಷ್ಠಿಯಲ್ಲಿ ಡಾ. ಎಸ್. ರೂಬನ್, ಗ್ಲೆನ್ಸನ್ ಟೋನಿ ಹಾಗೂ ಮೊಹಮ್ಮದ್ ಸಿರಾಜ್ ಬಿ. ವಿಷಯ ಮಂಡಿಸಿದರು.

ಕಣಚೂರು ವೈದ್ಯಕೀಯ ಕಾಲೇಜು, ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರ ಮತ್ತು ಅಲೋಶಿಯಸ್ ವಿ.ವಿ ಅಧ್ಯಾಪಕರು, ಸಂಶೋಧಕರು ಮತ್ತು ವೃತ್ತಿಪರರು ಭಾಗವಹಿಸಿದ್ದರು.

*Varthabharathi 19-05-2026*

# ಅಲೋಶಿಯಸ್ ವಿವಿಯಲ್ಲಿ 'ಅನ್‌ಬಾಕ್ಸಿಂಗ್ ಎಐ 2.0' ಕಾರ್ಯಕ್ರಮ



ಮಂಗಳೂರು, ಮೇ 18: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ವಿಭಾಗವು, ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ ವೈದ್ಯಕೀಯ ವೃತ್ತಿಪರರಿಗೆ 'ಅನ್‌ಬಾಕ್ಸಿಂಗ್ ಎಐ 2.0' ಎಂಬ ಪ್ರಾಯೋಗಿಕ ಕಾರ್ಯಾಗಾರವನ್ನು ಇತ್ತೀಚೆಗೆ ಹಮ್ಮಿಕೊಂಡಿತ್ತು.

ಅಲೋಶಿಯಸ್ ವಿವಿಯ ಕುಲಪತಿ ಫಾ.ಡಾ.ಪ್ರವೀಣ್ ಮಾರ್ಟಿಸ್ ಎಸ್‌ಜೆ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಫಾದರ್ ಮುಲ್ಲರ್ ಚಾರಿಟೇಬಲ್ ಸಂಸ್ಥೆಗಳ ನಿರ್ದೇಶಕ ಫಾ.ಫೌಸ್ಟಿನ್ ಲ್ಯೂಕಾಸ್ ಲೋಬೊ, ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ.ರಮೇಶ್ ಭಟ್ ಎಂ. ಭಾಗವಹಿಸಿದ್ದರು.

ಉದ್ಘಾಟನಾ ಅಧಿವೇಶನದ ನಂತರ ಸಂಶೋಧನೆ ಮತ್ತು ನಾವೀನ್ಯತೆಯಲ್ಲಿ ಎಐ ಪಾತ್ರದ ಮೇಲೆ ಕೇಂದ್ರೀಕರಿಸುವ ತಾಂತ್ರಿಕ ಅವಧಿಗಳ ಸರಣಿ ನಡೆಯಿತು. ಅಂತಿಮ ಅಧಿವೇಶದಲ್ಲಿ 'ರಿಸರ್ಚ್‌ಥಾನ್: ಎಐ' ಪರಿಕರಗಳನ್ನು ಬಳಸಿಕೊಂಡು ಸ್ಮಾರ್ಟ್ ರಿಸರ್ಚ್ ವರ್ಕ್ ಫ್ಲೋಗಳ' ಬಗ್ಗೆ ಮುಹಮ್ಮದ್ ಸಿರಾಜ್ ಬಿ. ನಿರ್ವಹಿಸಿದರು.

ಡಾ.ಎಸ್.ರೂಬನ್ ಸ್ವಾಗತಿಸಿದರು. ಡಾ.ಗ್ಲೆನ್ಸನ್ ಟೋನಿ ಕಾರ್ಯಕ್ರಮ ನಿರೂಪಿಸಿದರು. ಡಾ.ಗೀತಾ ಪಿಂಟೊ ವಂದಿಸಿದರು. ಕಾರ್ಯಾಗಾರದಲ್ಲಿ ಕಣಚೂರು ವೈದ್ಯಕೀಯ ಕಾಲೇಜು, ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರ ಮತ್ತು ಅಲೋಶಿಯಸ್ ವಿವಿ ಅಧ್ಯಾಪಕರು, ಸಂಶೋಧಕರು ಮತ್ತು ವೃತ್ತಿಪರರು ಸೇರಿದಂತೆ ಸುಮಾರು 40 ಮಂದಿ ಭಾಗವಹಿಸಿದ್ದರು.

*Varthabharathi 27-05-2026*

# ಮೇ 30ರಂದು ಸಂತ ಅಲೋಶಿಯಸ್ ಕಾಲೇಜು ಘಟಿಕೋತ್ಸವ

ಮಂಗಳೂರು, ಮೇ 26: ಸಂತ ಅಲೋಶಿಯಸ್ ಕಾಲೇಜಿನ 16ನೇ ಘಟಿಕೋತ್ಸವ ಮೇ 30ರಂದು ಅಪರಾಹ್ನ 2ಕ್ಕೆ ಪದವಿ ಪೂರ್ವ ಕಾಲೇಜಿನ ಲೊಯೊಲಾ ಸಭಾಂಗಣದಲ್ಲಿ ನಡೆಯಲಿದೆ.

ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮಂಗಳೂರು ಜೆಸ್ವಿಟ್ ಎಜುಕೇಶನಲ್ ಸೊಸೈಟಿಯ ಅಧ್ಯಕ್ಷ ಹಾಗೂ ಕರ್ನಾಟಕ ಪ್ರಾವಿನ್ಸ್‌ನ ಪ್ರೊವಿನ್ಷಿಯಲ್ ರೆ.ಫಾ.ಡಯನೇಶಿಯಸ್ ವಾಝ್, ಎಂಜೆಇಎಸ್‌ನ ರೆಕ್ಟರ್ ರೆ.ಫಾ.ಬ್ರಾಯನ್ ಪಿರೇರ, ಪ್ರಾಂಶುಪಾಲರು, ಆಡಳಿತ ಮಂಡಳಿ ಹಾಗೂ ಶೈಕ್ಷಣಿಕ ಮಂಡಳಿಯ ಸದಸ್ಯರು ಭಾಗವಹಿಸಲಿದ್ದಾರೆ.

ಸುಮಾರು 2000 ಪದವೀಧರರು ಘಟಿಕೋತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದು ಕಾಲೇಜು ಪ್ರಕಟನೆ ತಿಳಿಸಿದೆ.

*Udayavani 26-05-2026*

## ಮಂಗಳೂರಿನ ನಿಶೆಲ್ ಭಾರತೀಯ ನೌಕಾಪಡೆಯಲ್ಲಿ ಸಬ್ ಲೆಫ್ಟಿನೆಂಟ್ ಆಗಿ ನೇಮಕ



ಮಂಗಳೂರು, ಮೇ 25: ನಗರದ ನಿಶೆಲ್ ಫ್ಲೋರಾ ಅಲ್ಮೆಡಾ ಭಾರತೀಯ ನೌಕಾಪಡೆಯಲ್ಲಿ ಸಬ್ ಲೆಫ್ಟಿನೆಂಟ್ ಹುದ್ದೆಗೆ ನೇಮಕಗೊಂಡಿದ್ದಾರೆ.

ಕುಲಶೇಖರದ ಕೊಂಗೂರು ನಿವಾಸಿಯಾದ ಅವರು, ಸಂತ ಅಲೋಶಿಯಸ್‌ನಲ್ಲಿ ಪಿಯುಸಿ ಮುಗಿಸಿ ಬೆಂಗಳೂರಿನಲ್ಲಿ ಏರೋನಾಟಿಕಲ್ ಎಂಜಿನಿಯರಿಂಗ್‌ನಲ್ಲಿ 2ನೇ ರ್‍ಯಾಂಕ್ ಪಡೆದಿದ್ದರು.

ಭಾರತೀಯ ಸಶಸ್ತ್ರ ಪಡೆಗಳಿಗೆ ಪ್ರವೇಶ ನೀಡುವ ಆಯ್ಕೆ ಪ್ರಕ್ರಿಯೆಗಳಲ್ಲಿ ಒಂದಾದ ಎಸ್ ಎಸ್‌ಬಿ ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ತರಬೇತಿಗೆ ಆಯ್ಕೆಗೊಂಡಿದ್ದರು.

2025ರ ಜೂನ್‌ನಿಂದ ಕೇರಳದ ಪಯ್ಯನ್ನೂರಿನಲ್ಲಿ ಒಂದು ವರ್ಷದ ತರಬೇತಿ ಪೂರ್ಣಗೊಳಿಸಿದ್ದಾರೆ. ಮೇ 28ಕ್ಕೆ ಸಬ್ ಲೆಫ್ಟಿನೆಂಟ್ ಆಗಿ ನೇಮಕಗೊಳ್ಳಲಿದ್ದಾರೆ. ಇವರು ನವೀನ್ ಅಲ್ಮೆಡಾ ಹಾಗೂ ಕ್ರಿಸ್ ಎವರ್ಟ್ ಡಿಸೋಜಾ ಅವರ ಪುತ್ರಿ. ಈ ದಿನಕ್ಕಾಗಿ ಬಾಲ್ಯದಿಂದಲೇ ಕನಸು ಕಟ್ಟಿಕೊಂಡಿದ್ದೆ. ಅದೀಗ ಈಡೇರಿದೆ ಎಂದಿದ್ದಾರೆ ನಿಶೇಲ್.

*Prajavani 24-05-2026*

## 'ಸ್ವಾತಂತ್ರ್ಯದ ಓಟ' ಪ್ರದರ್ಶನ 27ರಂದು

ಮಂಗಳೂರು: ಬೊಳುವಾರು ಮಹಮ್ಮದ್ ಕುಂಞ್ ಅವರ ಕಾದಂಬರಿ ಆಧಾರಿತ ನಾಟಕ 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನ ಮೇ 27ರಂದು ಸಂಜೆ 6.15ಕ್ಕೆ ನಗರದ ಸೇಂಟ್ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ನಡೆಯಲಿದೆ.

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ, ಅರೆಹೊಳೆ ಪ್ರತಿಷ್ಠಾನ ಮತ್ತು ಅಸ್ತಿತ್ವ ಆಶ್ರಯದಲ್ಲಿ ಶಿವಮೊಗ್ಗದ ರಂಗಾಯಣ ನಾಟಕ ಪ್ರಸ್ತುತಪಡಿಸಲಿದೆ. ಮಾಹಿತಿಗೆ: 9880353917.

*Udayavani 25-05-2026*

## ಮೇ 27: ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನ

**ಮಹಾನಗರ, ಮೇ 24:** ಅರೆಹೊಳೆ ಪ್ರತಿಷ್ಠಾನ, ಅಸ್ತಿತ್ವ ಮಂಗಳೂರು, ರಂಗ ಅಧ್ಯಯನ ಕೇಂದ್ರ, ಸಂತ ಅಲೋಶಿಯಸ್ (ಪರಿಗಣಿತ) ವಿವಿ 'ಆಯೋಜನೆಯಲ್ಲಿ ರಂಗಾಯಣ ಶಿವಮೊಗ್ಗ ಕಲಾವಿದರಿಂದ ಬೊಳುವಾರು ಮಹಮ್ಮದ್ ಕುಂಞ ಅವರ ಕಾದಂಬರಿ ಆಧಾರಿತ 'ಸ್ವಾತಂತ್ರ್ಯದ ಓಟ' ನಾಟಕ ಮೇ 27ರಂದು ಸಂಜೆ 6.15ಕ್ಕೆ ಸಂತ ಅಲೋಶಿಯಸ್ ವಿವಿಯ ಸಹೋದಯ ಸಭಾಂಗಣ ಪ್ರದರ್ಶನಗೊಳ್ಳಲಿದೆ ಎಂದು ಪ್ರಕಟನೆ ತಿಳಿಸಿದೆ.

*Kannadaprabha 27-05-2026*

## 30ರಂದು ಘಟಿಕೋತ್ಸವ

**ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ (ಸ್ವಾಯತ್ತ) ಕಾಲೇಜಿನ 16ನೇ ಘಟಿಕೋತ್ಸವ ಮೇ 30ರಂದು ಮಧ್ಯಾಹ್ನ 2 ಗಂಟೆಗೆ ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನ ಲೊಯೊಲಾ ಹಾಲ್‌ನಲ್ಲಿ ನಡೆಯಲಿದೆ. ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಮುಖ್ಯ ಅತಿಥಿಯಾಗಿ ಘಟಿಕೋತ್ಸವ ಭಾಷಣ ಮಾಡುವರು. ಮಂಗಳೂರು ಜೆಜ್ವಿಟ್ ಎಜುಕೇಶನಲ್ ಸೊಸೈಟಿ ಅಧ್ಯಕ್ಷ, ಕರ್ನಾಟಕ ಪ್ರೊವಿನ್ಶಿಯಲ್ ರೆ.ಫಾ. ಡಯನೀಶಿಯಲ್ ವಾಜ್, ಎಂಜೆಇಎಸ್‌ನ ರೆಕ್ಟರ್ ರೆ.ಫಾ. ಬ್ರಾಯನ್ ಪಿರೇರಾ ಮತ್ತಿತರರು ಉಪಸ್ಥಿತರಿರುವರು. ಸಮಾರಂಭದಲ್ಲಿ ಕಾಲೇಜಿನಲ್ಲಿ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಹಾಗೂ ಮೆಡಲ್‌ಗಳನ್ನು ನೀಡಿ ಅಭಿನಂದಿಸಲಾಗುವುದು.

*Udayavani 28-05-2026*

**ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜು**

# ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಓರಿಯೆಂಟೇಶನ್ ಕಾರ್ಯಕ್ರಮ



**ಕೊಡಿಯಾಲ್ ಬೈಲ್, ಮೇ 27:** ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿಗೆ ಸೇರ್ಪಡೆಯಾದ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಓರಿಯೆಂಟೇಶನ್ ಕಾರ್ಯಕ್ರಮ ನಡೆಯಿತು.

ಕಾಲೇಜಿನ ಪ್ರಾಂಶುಪಾಲ ವಂ| ಕ್ಲಿಫರ್ಡ್ ಸಿಕ್ವೇರಾ ಮಾತನಾಡಿ, ಪಿಯುಸಿಯ ಎರಡು ವರ್ಷಗಳು ಬಾಲ್ಯ ಮತ್ತು ಪ್ರೌಢಾವಸ್ಥೆಯ ನಡುವಿನ ಪರಿವರ್ತಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ. ಶೈಕ್ಷಣಿಕ, ಸಹಪಠ್ಯ ಮತ್ತು ವೈಯಕ್ತಿಕ ಅಭಿವೃದ್ಧಿಯನ್ನು ಒಳಗೊಂಡ ಸಮಗ್ರ ರಚನೆಗೆ ಕಾಲೇಜು ಬದ್ಧವಾಗಿದೆ ಎಂದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಪಿಜಿ ಡಿಪಾರ್ಟ್‌ಮೆಂಟ್ ಆಫ್ ಸೋಶಿಯಲ್ ವರ್ಕ್ ನ ಮುಖ್ಯಸ್ಥರಾದ ಡಾ| ವಿದ್ಯಾ ವಿನುತಾ ಡಿ'ಸೋಜಾ ಅವರು ಮಾತನಾಡಿ, ಶಿಸ್ತು, ಕರುಣೆ ಮತ್ತು ಸಹಾನುಭೂತಿಯು ವಿದ್ಯಾರ್ಥಿಗಳನ್ನು ಸೂಕ್ಷ್ಮ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ವ್ಯಕ್ತಿಗಳಾಗಿ ರೂಪಿಸುತ್ತದೆ. ನಾಯಕತ್ವ, ಸಾಮಾಜಿಕ ತೊಡಗಿಸಿಕೊಳ್ಳುವಿಕೆ ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸುವ ಅವಕಾಶಗಳ ಮೂಲಕ ಶ್ರೇಷ್ಠತೆ ಮತ್ತು ಸಮಗ್ರ ಬೆಳವಣಿಗೆಗೆ ಸಂಸ್ಥೆಯು ಬದ್ಧವಾಗಿದೆ. ಸ್ನೇಹವನ್ನು ರೂಪಿಸುವಲ್ಲಿ ಚಿಂತನಶೀಲ ಮತ್ತು ವಿವೇಚನಾ ಶೀಲರಾಗಿರಬೇಕು. ಸಾಮಾಜಿಕ ಮಾಧ್ಯಮವು ಪಾತ್ರ ಮತ್ತು ಮೌಲ್ಯಗಳನ್ನು ವ್ಯಾಖ್ಯಾನಿಸಲು ಅವಕಾಶ ನೀಡಬಾರದು. ವಿದ್ಯಾರ್ಥಿಗಳು ಕಲಿಕೆ ಮತ್ತು ವೈಯಕ್ತಿಕ ಬೆಳವಣಿಗೆಯ ಕಡೆಗೆ ಗಮನಹರಿಸಬೇಕು ಎಂದರು.

ಸ್ಕೂಲ್ ಆಫ್ ಸೋಶಿಯಲ್ ವರ್ಕ್ ರೋಶನಿ ನಿಲಯದ ಸೈಕಾಲಜಿ ವಿಭಾಗದ ಮುಖ್ಯಸ್ಥೆ ಡಾ| ಸ್ಯಾಂಡ್ರಾ ಸುನೀತಾ ಲೋಬೋ ಅವರು ಮಾತನಾಡಿ, ಕಠಿನ ಪರಿಶ್ರಮ, ಸ್ಥಿರತೆ, ಭಾವನಾತ್ಮಕ ಸಮತೋಲನ, ಶಿಸ್ತು ಮತ್ತು ತ್ಯಾಗದಿಂದಾಗಿ ಅಂಕಗಳಂತಹ ವಿಷಯಗಳನ್ನು ಮೀರಿದ್ದು ಶಿಸ್ತು ಇಲ್ಲದಿದ್ದರೆ ಪ್ರತಿಭೆ ದುರ್ಬಲಗೊಳ್ಳುತ್ತದೆ. ಭಾವನಾತ್ಮಕ ಬೆಂಬಲವಿಲ್ಲದೆ ಪ್ರತಿಭೆ ದಿಕ್ಕನ್ನು ಕಳೆದುಕೊಳ್ಳುತ್ತದೆ. ವಿದ್ಯಾರ್ಥಿಗಳು ಬುದ್ಧಿವಂತಿಕೆಯಿಂದ ಸ್ನೇಹಿತರನ್ನು ಆಯ್ಕೆ ಮಾಡಬೇಕು. ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಅಗತ್ಯ. ಕಷ್ಟದ ಸಮಯದಲ್ಲಿ ಸಹಾಯವನ್ನು ಪಡೆಯುವುದು ಬುದ್ಧಿವಂತಿಕೆ ಮತ್ತು ಶಕ್ತಿಯ ಸಂಕೇತವಾಗಿದೆ ಎಂದರು. ಈ ಸಂದರ್ಭದಲ್ಲಿ ಕಾಲೇಜಿನ ಕ್ಯಾಂಪಸ್ ಮಿನಿಸ್ಟರ್ ವಂ| ಆ್ಯಂಟನಿ ಡೇರಿಕ್, ಉಪಪ್ರಾಂಶುಪಾಲ ಮುರಳಿಕೃಷ್ಣ ಜಿ.ಎಂ., ಡೀನ್‌ಗಳಾದ ಕಿರಣ್ ಶೆಟ್ಟಿ ಹಾಗೂ ಇನಾಸ್ ಡಾಯಸ್, ಕಾರ್ಯಕ್ರಮದ ಸಂಚಾಲಕರಾದ ಶರಿತಾ ಡಿ'ಸಿಲ್ವಾ ನಿಹಾ ಫಾತಿಮ್ ಹಾಗೂ ವೀಕ್ಷಿತಾ ಯು. ಉಪಸ್ಥಿತರಿದ್ದರು. ಉಪನ್ಯಾಸಕಿ ಸಾರಾ ಕ್ರಾಸ್ತಾ ನಿರೂಪಿಸಿದರು.

*Prajavani 01-06-2026*

# ಸೇಂಟ್ ಅಲೋಶಿಯಸ್: ಘಟಿಕೋತ್ಸವ

## ವಿವಿಧ ಕೋರ್ಸ್‌ಗಳ 2,630 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ




ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಮಾತನಾಡಿದರು

ಮಂಗಳೂರು: 'ತಂತ್ರಜ್ಞಾನ ಯುಗದಲ್ಲಿ ಶಿಕ್ಷಣವು ತನ್ನ ಪ್ರಶ್ನಿಸುವ ಮನೋಭಾವವನ್ನು ಉಳಿಸಿಕೊಂಡು, ಹೇಗೆ ಕಲಿಯಬೇಕು ಎಂಬ ಕಲಿಕಾ ಸಾಮರ್ಥ್ಯ ಬೆಳೆಸಬೇಕು. ಈ ನಿಟ್ಟಿನಲ್ಲಿ ಸೇಂಟ್ ಅಲೋಶಿಯಸ್ ಸಂಸ್ಥೆ ಶ್ಲಾಘನೀಯ ಕಾರ್ಯ ಮಾಡುತ್ತಿದೆ' ಎಂದು ಶಿವಮೊಗ್ಗ ಕುವೆಂಪು ವಿಶ್ವ-ವಿದ್ಯಾಲಯದ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಹೇಳಿದರು.

ಸೇಂಟ್ ಅಲೋಶಿಯಸ್ ಕಾಲೇಜಿನ (ಸ್ವಾಯತ್ತ) 16ನೇ ಘಟಿಕೋತ್ಸವ-ದಲ್ಲಿ ಅವರು ಪದವಿ ಪ್ರದಾನ ಮಾಡಿ ಮಾತನಾಡಿದರು.

ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠ ಫಾ.ಬ್ರಾಯನ್ ಪಿರೇರಾ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೊಮಾದ 2,630 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 91 ರ್‍ಯಾಂಕ್, 16 ವಿಶೇಷ ಬಹುಮಾನ ವಿತರಿಸಲಾಯಿತು.

ಮಂಗಳೂರು ಜೆಸ್ವಿಟ್ ಎಜುಕೇಷನಲ್ ಸೊಸೈಟಿ ಅಧ್ಯಕ್ಷ, ಕರ್ನಾಟಕ ಜೆಸ್ವಿಟ್ ಪ್ರೊವಿನ್ಸ್ ಪ್ರಾಂತೀಯ ಮುಖ್ಯಸ್ಥ ಫಾ. ಡಯೋನಿಶಿಯಸ್ ವಾಝ್ ಎಸ್.ಜೆ. ಮಾತನಾಡಿ, ವಿದ್ಯಾರ್ಥಿಗಳು ತಾವು ಪ್ರೀತಿಸುವ ಕ್ಷೇತ್ರ ಅನುಸರಿಸಬೇಕು. ನಿಮ್ಮ ಮೇಲೆ ವಿಶ್ವಾಸವಿರಲಿ, ಸೇವಾ ಮನೋಭಾವದ ಮೂಲಕ ಜಗತ್ತಿಗೆ ಶಕ್ತಿ ತುಂಬಿ, ಜ್ಞಾನದಿಂದ ಜಗತ್ತನ್ನು ಸಮೃದ್ಧಗೊಳಿಸಿ ಎಂದರು.

ಪ್ರಾಂಶುಪಾಲ ಪ್ರವೀಣ್ ಮಾರ್ಟಿಸ್ ಎಸ್.ಜೆ. ಸ್ವಾಗತಿಸಿದರು. ಕುಲಸಚಿವ ರೊನಾಲ್ಡ್ ನಜರೆತ್ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು, ವಿಶೇಷ ಬಹುಮಾನ ವಿಜೇತ ವಿದ್ಯಾರ್ಥಿಗಳ ಪಟ್ಟಿ ವಾಚಿಸಿದರು. ಆಡಳಿತ ಮಂಡಳಿ, ಶೈಕ್ಷಣಿಕ ಮಂಡಳಿ ಸದಸ್ಯರು, ನಿರ್ದೇಶಕರು, ಡೀನ್‌ಗಳು, ಬೋಧಕ- ಬೋಧಕೇತರ ಸಿಬ್ಬಂದಿ, ಹಳೆ ವಿದ್ಯಾರ್ಥಿ ಸಂಘದ ಸದಸ್ಯರು ಭಾಗವಹಿಸಿದ್ದರು.

ಘಟಿಕೋತ್ಸವದ ಸಂಯೋಜಕಿ ವೈಶಾಲಿ ರೈ ವಂದಿಸಿದರು. ಉಪನ್ಯಾ-ಸಕರಾದ ವಿದ್ಯಾ ವಿನುತಾ ಡಿಸೋಜ, ಸಂಜುಪ್ ನಿರೂಪಿಸಿದರು.

*Indian Express 01-06-2026*

# ST ALOYSIUS COLLEGE HOLDS 16th GRADUATION CEREMONY

**EXPRESS NEWS SERVICE**
@ Mangaluru

St Aloysius College (Autonomous), Mangaluru, celebrated its 16th Graduation Day recently, honouring the academic accomplishments of its graduating students.

A release from the college stated that as many as 91 rank holders were honoured, with 16 special prizes awarded to exceptional performers. In total, 2,630 students graduated this year.

In his graduation day address, Prof. Sharath Ananthamurthy, Vice Chancellor of Kuvempu University, Shivamogga, encouraged the graduates to carry the Aloysian spirit of learning, growing and serving generously in their future lives. "Education in a technology-driven world must retain its spirit of enquiry and nurture the ability to learn how to learn. St Aloysius has always done commendable work on this front," he added.



Prof. Sharath Ananthamurthy, Vice Chancellor of Kuvempu University, presents a degree to a graduate. Dr Praveen Martis S.J, principal, looks on

Fr Dionysius Vaz SJ, President of Mangaluru Jesuit Educational Society (MJES) and the Provincial of Karnataka Jesuit Province urged the students to pursue what they love doing and transcend the rat race. "Have faith in yourself, enable the world with the spirit of serving, and enrich the world with new knowledge", he added.

Dr Praveen Martis SJ, Principal of St Aloysius College, emphasised the importance of purposeful action. The Registrar, Dr Ronald Nazareth, presented the list of graduating students, recognising outstanding achievers.

*Vijayavani 31-05-2026*

# ಸಂತ ಅಲೋಶಿಯಸ್ ಕಾಲೇಜು ಘಟಿಕೋತ್ಸವ

**ಮಂಗಳೂರು:** ಸಂತ ಅಲೋಶಿಯಸ್ ಕಾಲೇಜಿನ 16ನೇ ಘಟಿಕೋತ್ಸವವು ಇತ್ತೀಚೆಗೆ ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನ ಲೊಯೋಲಾ ಸಭಾಂಗಣದಲ್ಲಿ ನಡೆಯಿತು. ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠ ಬ್ರಾಯನ್ ಪಿರೇರಾ ಎಸ್.ಜೆ. ಪ್ರಮಾಣ ವಚನ ಬೋಧಿಸಿದರು. ಒಟ್ಟು 91 ರ್‍ಯಾಂಕುಗಳು ಹಾಗೂ 16 ವಿಶೇಷ ಬಹುಮಾನಗಳನ್ನು ವಿತರಿಸಲಾಯಿತು. ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ವಿದ್ಯಾರ್ಥಿಗಳು ಒಟ್ಟು 2630 ವಿದ್ಯಾರ್ಥಿಗಳು ಘಟಿಕೋತ್ಸವ ಪ್ರಮಾಣಪತ್ರ ಪಡೆದರು.

ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರತ್ ಅನಂತಮೂರ್ತಿ, ಮಂಗಳೂರು ಜೆಸ್ವಿಟ್ ಎಜ್ಯುಕೇಶನಲ್ ಸೊಸೈಟಿ ಅಧ್ಯಕ್ಷ ಡಯೋನಿಶಿಯಸ್ ವಾಝ್ ಎಸ್.ಜೆ. ಶುಭಹಾರೈಸಿದರು.

ಕುಲಸಚಿವ ಡಾ. ರೊನಾಲ್ಡ್ ನಜರೆತ್ ರ್‍ಯಾಂಕ್ ವಿದ್ಯಾರ್ಥಿಗಳ ಹಾಗೂ ವಿಶೇಷ ಬಹುಮಾನ ವಿಜೇತ ವಿದ್ಯಾರ್ಥಿಗಳ ಹೆಸರನ್ನು ವಾಚಿಸಿದರು. ಆಡಳಿತ ಮಂಡಳಿಯ ಸದಸ್ಯರು, ಶೈಕ್ಷಣಿಕ ಮಂಡಳಿಯ ಸದಸ್ಯರು, ನಿರ್ದೇಶಕರು, ಡೀನ್‌ಗಳು, ಬೋಧಕ, ಬೋಧಕೇತರ ಸದಸ್ಯರು, ಸಂತ ಅಲೋಶಿಯಸ್ ಕಾಲೇಜ್ ಹಳೆ ವಿದ್ಯಾರ್ಥಿ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಪ್ರಾಂಶುಪಾಲ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಸ್ವಾಗತಿಸಿದರು. ಉಪನ್ಯಾಸಕರಾದ ಡಾ.ವಿದ್ಯಾ ವಿನುತಾ ಡಿಸೋಜ ಮತ್ತು ಡಾ. ಸಂಜುಪ್ ಕಾರ್ಯಕ್ರಮ ನಿರೂಪಿಸಿದರು. ಸಂಯೋಜಕ ಡಾ.ವೈಶಾಲಿ ರೈ ವಂದಿಸಿದರು.




**ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನ ಲೊಯೋಲಾ ಸಭಾಂಗಣದಲ್ಲಿ ನಡೆದ ಸಂತ ಅಲೋಶಿಯಸ್ ಕಾಲೇಜಿನ 16ನೇ ಘಟಿಕೋತ್ಸವದಲ್ಲಿ ಬ್ರಾಯನ್ ಪಿರೇರಾ ಎಸ್.ಜೆ. ಮಾತನಾಡಿದರು. ಪ್ರಮುಖರಾದ, ಪ್ರೊ.ಶರತ್ ಅನಂತಮೂರ್ತಿ, ಡಯೋನಿಶಿಯಸ್ ವಾಝ್ ಎಸ್.ಜೆ., ಡಾ. ರೊನಾಲ್ಡ್ ನಜರೆತ್, ಡಾ.ಪ್ರವೀಣ್ ಮಾರ್ಟಿಸ್ ಮೊದಲಾದವರಿದ್ದರು.**

*Varthabharathi 31-05-2026*

# ಸಂತ ಅಲೋಶಿಯಸ್ ಕಾಲೇಜಿನ 16ನೇ ಘಟಿಕೋತ್ಸವ

ಮಂಗಳೂರು, ಮೇ 30: ಸಂತ ಅಲೋಶಿಯಸ್ ಕಾಲೇಜಿ (ಸ್ವಾಯತ್ತ)ನ 16ನೇ ಘಟಿಕೋತ್ಸವವು ಸಂತ ಶನಿವಾರ ಅಲೋಶಿಯಸ್ ಪಪೂ ಕಾಲೇಜಿನ ಲೊಯೋಲಾ ಸಭಾಂಗಣದಲ್ಲಿ ನಡೆಯಿತು.

ಘಟಿಕೋತ್ಸವದಲ್ಲಿ ಒಟ್ಟು 91 ರ್‍ಯಾಂಕ್‌ಗಳು ಹಾಗೂ 16 ವಿಶೇಷ ಬಹುಮಾನಗಳನ್ನು ವಿತರಿಸಲಾಯಿತು. ಸ್ನಾತಕ ಪದವಿ, ಸ್ನಾತ ಕೋತ್ತರ ಪದವಿ ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಸಹಿತ ಒಟ್ಟು 2,630 ವಿದ್ಯಾರ್ಥಿ ಗಳು ಘಟಿಕೋತ್ಸವ ಪ್ರಮಾಣಪತ್ರ ಪಡೆದು ಕೊಂಡರು.

ಕಾರ್ಯಕ್ರಮದ ಮುಖ್ಯ ಅತಿಥಿ ಶಿವಮೊಗ್ಗ ಕುವೆಂಪು ವಿವಿಯ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಮಾತನಾಡಿ, ತಂತ್ರಜ್ಞಾನ ಚಾಲಿತ ಜಗತ್ತಿನಲ್ಲಿ ಶಿಕ್ಷಣವು ತನ್ನ ಪ್ರಶ್ನಿಸುವ ಮನೋಭಾವವನ್ನು ಉಳಿಸಿಕೊಂಡು, ಹೇಗೆ ಕಲಿಯಬೇಕು ಮತ್ತು ಕಲಿಕೆಯ ಸಾಮರ್ಥ್ಯವನ್ನು ಹೇಗೆ ಬೆಳೆಸಬೇಕು ಎಂಬ ನಿಟ್ಟಿನಲ್ಲಿ ಸಂತ ಅಲೋಶಿಯಸ್ ಸಂಸ್ಥೆ ಶ್ಲಾಘನೀಯ ಕಾರ್ಯವನ್ನು ಮಾಡುತ್ತಿದೆ ಎಂದರು.

ಮಂಗಳೂರು ಜೆಸ್ವಿಟ್ ಎಜುಕೇಶನಲ್ ಸೊಸೈಟಿಯ ಅಧ್ಯಕ್ಷ ಹಾಗೂ ಕರ್ನಾಟಕ ಜೆಸ್ವಿಟ್ ಪ್ರೊವಿನ್ಸ್‌ನ ಪ್ರಾಂತೀಯ ಮುಖ್ಯಸ್ಥ ಫಾ.ಡಯೋನಿಶಿಯಸ್ ವಾಝ್ ಎಸ್.ಜೆ. ಮಾತನಾಡಿ, ತಾವು ಪ್ರೀತಿಸುವ ಕ್ಷೇತ್ರವನ್ನು ವಿದ್ಯಾರ್ಥಿಗಳು ಅನುಸರಿಸಬೇಕು ಮತ್ತು ಸ್ಪರ್ಧಾತ್ಮಕ ಓಟದ ಮನೋಭಾವವನ್ನು ಮೀರಬೇಕು ಎಂದು ಕರೆ ನೀಡಿದರು.

ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠ ಫಾ.ಬ್ರಾಯನ್ ಪಿರೇರಾ ಎಸ್.ಜೆ. ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ ಪ್ರವೀಣ್ ಮಾರ್ಟಿಸ್ ಎಸ್.ಜೆ. ಸ್ವಾಗತಿಸಿದರು. ಕುಲಸಚಿವ ಡಾ.ರೊನಾಲ್ಡ್ ನಝರೆತ್ ರ್‍ಯಾಂಕ್ ವಿದ್ಯಾರ್ಥಿಗಳ ಹಾಗೂ ವಿಶೇಷ ಬಹುಮಾನ ವಿಜೇತ ವಿದ್ಯಾರ್ಥಿಗಳ ಹೆಸರು ವಾಚಿಸಿದರು. ಆಡಳಿತ ಮಂಡಳಿಯ ಸದಸ್ಯರು, ಶೈಕ್ಷಣಿಕ ಮಂಡಳಿಯ ಸದಸ್ಯರು, ನಿರ್ದೇಶಕರು, ಡೀನ್‌ಗಳು, ಬೋಧಕ-ಬೋಧಕೇತರ ಸದಸ್ಯರು, ಸಂತ ಅಲೋಶಿಯಸ್‌ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಸದಸ್ಯರು ಉಪಸ್ಥಿತರಿದ್ದರು.

16ನೇ ಘಟಿಕೋತ್ಸವದ ಸಂಯೋಜಕಿ ಡಾ.ವೈಶಾಲಿ ರೈ ವಂದಿಸಿದರು. ಉಪನ್ಯಾ ಸಕರಾದ ಡಾ.ವಿದ್ಯಾ ವಿನುತಾ ಡಿಸೋಜ ಮತ್ತು ಡಾ.ಸಂಜುಪ್ ಕಾರ್ಯಕ್ರಮ ನಿರೂಪಿಸಿದರು.



*The Hindu 02-06-2026*

# 91 rank holders honoured during St. Aloysius College graduation

**The Hindu Bureau**
MANGALURU

St Aloysius College (Autonomous) organised its 16th grduation day recently, wherein 2,630 students graduated. As many as 91 rank holders were honoured, with 16 special prizes awarded.

The ceremony featured a solemn oath-taking led by St. Aloysius Institutions' rector Fr Brian Pereira, followed by the official declaration of the convocation by St. Aloysius (Deemed to be University) Chancellor Fr. Dionysius Vaz.



Students taking an oath at the 16th graduation day of St. Aloysius College (Autonomous) in Mangaluru. SPECIAL ARRANGEMENT

Delivering the convocation address, Kuvempu University Vice-Chancellor Sharath Ananthamurthy encouraged the graduating students to carry the Aloysian spirit of learning, growing and serving generously in their future lives.

He said, "Education in a technology driven world must retain its spirit of enquiry and nurture the ability to learn. St Aloysius has always done commendable work on this front."

Fr. Vaz urged students to pursue what they love doing and transcend above the rat race. "Have faith in yourself, enable the world with the spirit of serving, and enrich the world with new knowledge," he said.

St. Aloysius Vice Chancellor Praveen Martis, Registrar Ronald Nazareth and others were present.

ಉದಯವಾಣಿ
ಏಳು ದಿನಕ್ಕೊಮ್ಮೆ ಕಾಮನಬಿಲ್ಲು

## ಸಾಧನೆಯನ್ನೇ ಹವ್ಯಾಸವಾಗಿಸಿಕೊಂಡ
# ಕರಾವಳಿಯ ಬೆಡಗಿ

ಇನ್‌ಸ್ಟಾಗ್ರಾಂ ತೆರೆದರೆ ಸಾಕು, ಫೀಡ್‌ಗಳೆಲ್ಲ ಇವರ ಹೆಜ್ಜೆಗಳ ಕಥೆಯನ್ನೇ ಹೇಳುತ್ತವೆ. ಕಾಲಿಗೆ ಗೆಜ್ಜೆ ಕಟ್ಟಿ ಮುಖದ ತುಂಬ ನಗು ಹೊತ್ತು, ವೇದಿಕೆಯ ಮೇಲೆ ತಮ್ಮ ಭಾವ ಮತ್ತು ಲಯದಿಂದ ಸಾವಿರಾರು ಮನಸ್ಸುಗಳನ್ನು ಸೆಳೆಯುವ ಕರಾವಳಿಯ ಬೆಡಗಿಯೇ 'ಗೋಲ್ಡನ್ ಗರ್ಲ್' ಖ್ಯಾತಿಯ ರೆಮೋನಾ ಎವೆಟ್ ಪೆರೇರಾ. ಇವರ ನೃತ್ಯವೆಂದರೆ ಪರಿಶ್ರಮ, ಸಹನೆ ಮತ್ತು ಕನಸುಗಳ ಪ್ರತಿಬಿಂಬ. ಪ್ರತಿಯೊಂದು ಹೆಜ್ಜೆಯ ಹಿಂದೆ ಅನೇಕ ವರ್ಷಗಳ ಅಭ್ಯಾಸ, ಪ್ರತಿಯೊಂದು ನಗುವಿನ ಹಿಂದೆ ಅಸಂಖ್ಯಾತ ತ್ಯಾಗಗಳಿವೆ. ರೆಮೋನಾ ಎಂದರೆ ಕಲೆಗಾಗಿ ಬದುಕಿದ, ಕನಸಿಗಾಗಿ ಹೋರಾಡಿದ ಮತ್ತು ಸಾಧನೆಯ ಮೂಲಕ ಎಲ್ಲರಿಗೂ ಪ್ರೇರಣೆಯಾದ ಯುವ ಪ್ರತಿಭೆ.

ಮಂಗಳೂರಿನವರಾದ ಇವರು ತಮ್ಮ 3ನೇ ವಯಸ್ಸಿನಲ್ಲೇ ಭರತನಾಟ್ಯದತ್ತ ಮೊದಲ ಹೆಜ್ಜೆ ಇಟ್ಟರು. ಗುರು ಶ್ರೀವಿದ್ಯಾ ಮುರಳೀಧರ್ ಅವರ ಮಾರ್ಗದರ್ಶನದಲ್ಲಿ 13 ವರ್ಷಗಳಿಗೂ ಹೆಚ್ಚು ಕಾಲ ಭರತನಾಟ್ಯ ಅಭ್ಯಾಸ ಮಾಡಿ, 2019ರಲ್ಲಿ ರಂಗಪ್ರವೇಶ ನೆರವೇರಿಸಿದರು. ಭರತನಾಟ್ಯ ಮಾತ್ರವಲ್ಲದೆ ಅರೆ-ಶಾಸ್ತ್ರೀಯ, ಪಾಶ್ಚಾತ್ಯ, ಸಮಕಾಲೀನ ಹಾಗೂ ಇತರ ನೃತ್ಯ ಶೈಲಿಗಳಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ರಾಜ್ಯ ಬಾಲ ಗೌರವ ಪ್ರಶಸ್ತಿ ಹಾಗೂ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಗಳಿಗೆ ಭಾಜನರಾಗಿರುವ ಇವರು, ಭಾರತದ 15ಕ್ಕೂ ಹೆಚ್ಚು ರಾಜ್ಯಗಳಲ್ಲಿ ನೃತ್ಯ ಪ್ರದರ್ಶನವನ್ನು ನೀಡಿದ್ದಾರೆ. ಮಡಿಕೆಯ ಮೇಲೆ, ಗಾಜಿನ ಚೂರಿನ ಮೇಲೆ ಮತ್ತು ಬೆಂಕಿಯ ಜತೆಗೆ ನೃತ್ಯ ಮಾಡುವ ಅದ್ಭುತ ಸಾಮರ್ಥ್ಯ ಇವರದು.

2022ರಲ್ಲಿ ಇವರಿಗೆ ಒಲಿದುಬಂದ 'ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ'ವು ಇವರ ಪ್ರತಿಭೆಗೆ ರಾಷ್ಟ್ರಮಟ್ಟದ ಮನ್ನಣೆ ತಂದುಕೊಟ್ಟಿತು. ಈಗಾಗಲೇ 'ಇಂಡಿಯಾ ಬುಕ್ ಆಫ್ ರೆಕಾರ್ಡ್' ಸೇರಿದಂತೆ ಹಲವು ದಾಖಲೆ ಪುಸ್ತಕಗಳಲ್ಲಿ ತಮ್ಮ ಹೆಸರನ್ನು ಅಚ್ಚೊತ್ತಿರುವ ರೆಮೋನಾ, 2025ರ ಜುಲೈ 21ರಿಂದ 28ರ ವರೆಗೆ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ನಿರಂತರ 170 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶನ ನೀಡಿ 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ನಲ್ಲಿ ಸ್ಥಾನ ಪಡೆದಿದ್ದಾರೆ. ಇದು ವಿಶ್ವದಲ್ಲೇ ಮೊದಲ ಬಾರಿಗೆ ನಡೆದ ಭರತನಾಟ್ಯ ಮ್ಯಾರಥಾನ್ ಸಾಧನೆಯಾಗಿದೆ. ಪ್ರತಿ ಮೂರು ಗಂಟೆಗೆ ಕೇವಲ 15 ನಿಮಿಷಗಳ ವಿರಾಮವನ್ನು ಮಾತ್ರ ಪಡೆದು, 170 ಗಂಟೆಗಳ ಕಾಲ ನೃತ್ಯ ಮಾಡುವ ಮೂಲಕ ಅಸಾಧಾರಣ ಶಕ್ತಿ ಮತ್ತು ಸಹನೆಯನ್ನು ಇವರು ಪ್ರದರ್ಶಿಸಿದ್ದಾರೆ. ಈ ಸಾಧನೆಯ ಮೂಲಕ ಅವರು ಭಾರತೀಯ ಶಾಸ್ತ್ರೀಯ ನೃತ್ಯದ ಮಹತ್ವವನ್ನು ಜಗತ್ತಿಗೆ ಪರಿಚಯಿಸಿದರು.

ನೃತ್ಯವೆಂದರೆ ಕೇವಲ ವೇದಿಕೆಯ ಮೇಲಿನ ಪ್ರದರ್ಶನವಲ್ಲ, ಅದು ಮನಸ್ಸಿನ ಭಾಷೆ, ಆತ್ಮದ ಅಭಿವ್ಯಕ್ತಿ **ಮತ್ತು ಭಾವನೆಗಳ** ಹಬ್ಬ. ರೆಮೋನಾ ಅವರ ಪ್ರತಿಯೊಂದು **ಹೆಜ್ಜೆಯಲ್ಲೂ** ಈ ಸತ್ಯ ಸ್ಪಷ್ಟವಾಗಿ ಕಾಣಿಸುತ್ತದೆ. **ಮುಖದ ಭಾವ**, ಕಣ್ಣಿನ ಅಭಿವ್ಯಕ್ತಿ, ಲಯದ ಮೇಲಿನ **ಹಿಡಿತ ಮತ್ತು** ಪ್ರತಿಯೊಂದು ಚಲನವಲನದಲ್ಲಿರುವ **ಆತ್ಮವಿಶ್ವಾಸ** ಎಲ್ಲವೂ ಸೇರಿ ಇವರನ್ನು ವಿಭಿನ್ನವಾ**ಗಿಸುತ್ತವೆ.**



170 ಗಂಟೆಗಳ ಕಾಲ ನಿರಂತರವಾಗಿ ಭರತನಾಟ್ಯ ಪ್ರದರ್ಶನ ನೀಡುವುದು ಸಾಮಾನ್ಯ ಸಾಧನೆಯಲ್ಲ, ಅದು ದೈಹಿಕ ಶಕ್ತಿಯ ಪರೀಕ್ಷೆಯಷ್ಟೇ ಅಲ್ಲ, ಮಾನಸಿಕ ಸ್ಥೈರ್ಯ, ತಾಳ್ಮೆ ಮತ್ತು ಕಲೆಯ ಮೇಲಿನ ಅಪಾರ ಪ್ರೀತಿಯ ಪ್ರತೀಕ. ನಿದ್ರೆ, ದಣಿವು, ನೋವು ಇವೆಲ್ಲವನ್ನೂ ಮೀರಿ, ಅದೇ ನಗು, ಅದೇ ಉತ್ಸಾಹ ಮತ್ತು ಅದೇ ಸಮರ್ಪಣಾ ಭಾವದೊಂದಿಗೆ ಅವರು ನೃತ್ಯ ಮುಂದುವರಿಸಿದ್ದು ನಿಜಕ್ಕೂ **ಅಸಾ**ಧಾರಣ. ಇದು ಕೇವಲ ಒಂದು **ದಾಖಲೆ** ಮುರಿದ ಕ್ಷಣವಾಗಿ ರದೆ, ತನ್ನ ಕನಸಿ**ಗಾಗಿ** ಹೋರಾಡಿದ ಯುವತಿಯ ಅಭೂತಪೂರ್ವ ಗೆಲುವಿನ ಕ್ಷಣವಾಗಿದೆ.

ಇಂದು ರೆಮೋನಾ ಕೇವಲ ಒಬ್ಬ ನೃತ್ಯಗಾರ್ತಿಯಾಗಿರದೆ ಹಲವಾರು ಯುವತಿಯರ ಕನಸಿಗೆ ದಾರಿದೀಪವಾಗಿದ್ದಾರೆ. 'ಸಾಧನೆಗೆ ವಯಸ್ಸು ಅಡ್ಡಿಯಲ್ಲ, ಕನಸಿಗೆ ಮಿತಿಯಿಲ್ಲ' ಎಂಬ ಸಂದೇಶವನ್ನು ಅವರು ತಮ್ಮ ಜೀವನದ ಮೂಲಕ ಸಾರುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅವರ ಹೆಸರು ಕೇವಲ ಪ್ರಸಿದ್ಧಿಯಲ್ಲ, ಅದು ಪರಿಶ್ರಮದ ಮತ್ತೊಂದು ಹೆಸರಾಗಿದೆ. ■



■ ಕೆ.ಎಂ. ಪವಿತ್ರಾ,
ಮುರ್ಡೇಶ್ವರ



ಬಣ್ಣಗಳಿಗೆ
ಮನಸು ಬಿಚ್ಚಿ
ಕುಣಿಯುವ
ಹಬ್ಬ ಹೋಳಿ

ಸೂರ್ಯ
ಹೊರಟ
ಘಳಿಗೆ
ಕೆಂಪೇರಿತ್ತು.
ಚಂದ್ರ
ಬರುವಾಗ
ಜಗವೆಲ್ಲ
ತಂಪೇರಿತ್ತು!



# ಯುವ ಕನಸುಗಳಿಗೆ ರೆಕ್ಕೆಯಾಗೋಣ

ಭವಿಷ್ಯ ಎಂಬುದು ನಾಳೆಗೆ ಕಾಯುವ ಕನಸಲ್ಲ; ಅದು ಇಂದಿನ ಯುವಮನಸ್ಸುಗಳಲ್ಲಿ ರೂಪುಗೊಳ್ಳುವ ಆಶಾಭರವಸೆಯ ಚಿತ್ರ. ಸಮಾಜದ ದಿಕ್ಕನ್ನು ನಿರ್ಧರಿಸುವ ಶಕ್ತಿ ಯುವಜನರಲ್ಲಿದೆ. ಅವರ ಚಿಂತನೆ, ಶ್ರಮ ಮತ್ತು ಧೈರ್ಯ ಒಂದಾದಾಗ, ಭವಿಷ್ಯವು ಬೆಳಕಿನಿಂದ ತುಂಬುತ್ತದೆ. ಆದ್ದರಿಂದ ಯುವಶಕ್ತಿಯ ಜತೆ ಕೈಜೋಡಿಸಿ ಸಾಗುವುದು ಎಂದರೆ, ಬೆಳಕಿನ ಭವಿಷ್ಯದತ್ತ ಹೆಜ್ಜೆ ಇಟ್ಟಂತೆ.

ಇಂದಿನ ಯುವಕರು ಪ್ರಶ್ನಿಸುವ ಮನೋಭಾವ ಹೊಂದಿದ್ದಾರೆ. 'ಏಕೆ?' ಎಂಬ ಒಂದೇ ಪ್ರಶ್ನೆಯಿಂದ ಅವರು ಬದಲಾವಣೆಯ ಬೀಜ ಬಿತ್ತುತ್ತಾರೆ. ಶಿಕ್ಷಣ, ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಸಮಾಜಸೇವೆ, ಉದ್ಯಮಶೀಲತೆ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಯುವಶಕ್ತಿ ಹೊಸ ಉಸಿರನ್ನು ತುಂಬುತ್ತಿದೆ. ಆದರೆ ಈ ಶಕ್ತಿಗೆ ಸರಿಯಾದ ಮಾರ್ಗದರ್ಶನ ಮತ್ತು ಪ್ರೋತ್ಸಾಹ ದೊರೆತಾಗ ಮಾತ್ರ ಅದು ಸಾರ್ಥಕ ಫಲ ನೀಡಲು ಸಾಧ್ಯ.

ಯುವಜನರ ಜತೆ ನಡೆಯುವುದು ಎಂದರೆ ಅವರಿಗೆ ಕೇವಲ ಉಪದೇಶ ನೀಡುವುದಲ್ಲ; ಬದಲಾಗಿ ಅವರ ಮಾತುಗಳನ್ನು ಆಲಿಸುವುದು, ಅವರ ಕನಸುಗಳನ್ನು ಗೌರವಿಸುವುದು ಮತ್ತು ಅವರ ಪ್ರಯತ್ನಗಳಿಗೆ ಬೆಂಬಲವಾಗಿ ನಿಲ್ಲುವುದು. ಹಿರಿಯರ ಅನುಭವ ಮತ್ತು ಯುವಕರ ಉತ್ಸಾಹ ಒಂದಾದಾಗ, ಸಮಾಜದಲ್ಲಿ ಸಮತೋಲಿತ ಬೆಳವಣಿಗೆ ಸಾಧ್ಯ. ಉರಿಯುವ ಒಂದು ದೀಪ ಮತ್ತೊಂದು ದೀಪವನ್ನು ಬೆಳಗಿಸುವಂತೆ, ಯುವಮನಸ್ಸುಗಳು ಸಮಾಜವನ್ನು ಬೆಳಗಿಸಬಲ್ಲವು. ಆಶಾಭರವಸೆಯ ಭವಿಷ್ಯ ನಿರ್ಮಿಸಲು, ಯುವಕರನ್ನು ಇಂದಿನ ಬದಲಾವಣೆಯ ಪಾಲುದಾರರನ್ನಾಗಿಸಬೇಕು. ಸ್ವಚ್ಛತೆ, ಸಮಾನತೆ, ಸಾಮಾಜಿಕ ನ್ಯಾಯ, ಶಾಂತಿ ಮತ್ತು ಮಾನವೀಯ ಮೌಲ್ಯಗಳನ್ನು ಅನುಭವದ ಮೂಲಕ ಕಲಿಸಬೇಕು. ಮಾತಿಗಿಂತ ಕಾರ್ಯ ಮುಖ್ಯವಾಗಬೇಕು.

ಯುವಕರ ಕೈಗೆ ಜವಾಬ್ದಾರಿ ಕೊಟ್ಟಾಗ, ಅವರ ಬದುಕಿಗೆ ಒಂದು ಸ್ಪಷ್ಟ ಉದ್ದೇಶ ಸಿಗುತ್ತದೆ.

ಯುವಶಕ್ತಿಯ ಜತೆಗೆ ಸಾಗುವ ಈ ಪಯಣದಲ್ಲಿ ಪ್ರತಿಯೊಬ್ಬರೂ ಹೊಣೆಗಾರರು. ಶಿಕ್ಷಕರು ದಾರಿದೀಪವಾಗಬೇಕು, ಪಾಲಕರು ನಂಬಿಕೆಯ ನೆರಳಾಗಬೇಕು, ಸಮಾಜ ಅವಕಾಶಗಳ ವೇದಿಕೆಯಾಗಬೇಕು. ಏಕೆಂದರೆ ಯುವಕರು ಕೇವಲ ನಾಳೆಯ ನಾಯಕರಲ್ಲ; ಅವರು ಇಂದಿನ ಬದಲಾವಣೆಯ ಶಿಲ್ಪಿಗಳು. ಹೀಗಾಗಿ, ಯುವಶಕ್ತಿಯ ಜತೆ ಕೈಜೋಡಿಸಿ ನಡೆಯೋಣ. ಅವರ ಕನಸುಗಳಿಗೆ ರೆಕ್ಕೆ ನೀಡಿ, ಅವರ ಶಕ್ತಿಗೆ ದಿಕ್ಕು ತೋರಿಸೋಣ. ಯುವಜನರ ಜತೆಗಿನ ಈ ಪಯಣವೇ ನಮ್ಮೆಲ್ಲರಿಗೂ ಬೆಳಕು, ಶಾಂತಿ ಮತ್ತು ಭರವಸೆಯ ಭವಿಷ್ಯವನ್ನು ಕಟ್ಟಿಕೊಡುತ್ತದೆ.

ಅಂತಿಮವಾಗಿ ಹೇಳಬೇಕಾದರೆ, ಯುವಶಕ್ತಿಯ ಜತೆಗೆ ನಡೆಯುವ ಈ ಪಯಣವು ಕೇವಲ ಭವಿಷ್ಯದ ನಿರೀಕ್ಷೆಯಲ್ಲ, ಅದು ನಮ್ಮ ಇಂದಿನ ಜವಾಬ್ದಾರಿಯಾಗಿದೆ. ಯುವಮನಸ್ಸುಗಳಿಗೆ ನಂಬಿಕೆ, ಅವಕಾಶ ಮತ್ತು ಮಾರ್ಗದರ್ಶನ ನೀಡಿದಾಗ, ಅವರು ಸಮಾಜವನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸುತ್ತಾರೆ. ಯುವಜನರ ಕನಸುಗಳು ನಮ್ಮೆಲ್ಲರ ಆಶಯವಾಗಬೇಕು; ಅವರ ಸಾಧನೆಗಳು ನಮ್ಮೆಲ್ಲರ ಜಯವಾಗಬೇಕು. ಏಕೆಂದರೆ ಯುವಶಕ್ತಿಯನ್ನು ನಂಬುವ ಸಮಾಜವೇ, ನಿಜವಾದ ಮತ್ತು ಸಮೃದ್ಧ ಭವಿಷ್ಯವನ್ನು ಕಟ್ಟಬಲ್ಲದು. ■



■ ರೇಣುಕಾ ಸಂಗಪ್ಪನವರ
ಸಂತ ಅಲೋಶಿಯಸ್ ಪರಿಗಣಿತ ವಿವಿ, ಮಂಗಳೂರು

epaper.udayavani.com

## Digital News Links

1. St Aloysius Earns DASCA Accreditation, Strengthening Its Legacy of Future-Ready Data Science Education
   https://www.dasca.org/newsroom/st-aloysius-deemed-to-be-university-earns-dasca-accreditation-in-ai-and-data-science-programs?utm_source=LinkedIn_Official&utm_medium=PressRelease
2. Manngaluru: St Aloysius College holds 16th graduation ceremony
   https://daijiworld.com/news/newsDisplay?newsID=1315882
3. ಮಂಗಳೂರು: ಭಾರತೀಯ ನೌಕಾಪಡೆಯಲ್ಲಿ ಸಬ್ ಲೆಫ್ಟಿನೆಂಟ್ ಆಗಿ ನಿಶೆಲ್ ಫ್ಲೋರಾ ಆಲ್ಮೇಡಾ ಆಯ್ಕೆ
4. https://www.daijiworld.com/kannada/newsDisplay?newsID=130365
5. ALOYSEUM (St Aloysius Museum), Mangaluru: The Place Where Curiosity Comes Alive
   https://daijiworld.com/chan/exclusiveDisplay?articlesID=6972
6. ST ALOYSIUS COLLEGE (AUTONOMOUS) MANGALURU || 16TH GRADUATION DAY
   https://www.youtube.com/watch?v=OLU8yjTM_fg

**We invite you to visit https://digitallibrary.staloysius.edu.in to access the archives of news clippings related to our University. The archive serves as a valuable repository of media coverage, documenting important events, accomplishments, and developments of the University.**